# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂ.ವೈ.ಎಸ್-8411/2015

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ: 08.03.2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ಶಿಫಾರಸ್ಸು ವರದಿ

**ವಿಷಯ:** (1) ಶ್ರೀ ಎನ್.ಆರ್.ಸೋಮಶೇಖರ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಕಾರ ಸಂಘಗಳ, ಮಡಿಕೇರಿ ಮತ್ತು (2) ಶ್ರೀ ಎಸ್.ಜೆ.ರವಿಕುಮಾರ್, ಅಧ್ಯಕ್ಷರು, ಸಹಕಾರ ಸಂಘಗಳು, ಮಡಿಕೇರಿ ರವರುಗಳು ಸಾರ್ವಜನಿಕ ನೌಕರರಾಗಿದ್ದು ದುರ್ವರ್ತನೆಯಿಂದ ನಡೆದುಕೊಂಡಿದ್ದುದರ ನಡವಳಿಕೆ-ಕುರಿತು.

*****

ಶ್ರೀ ಜಿ.ಕೆ.ಲೋಹಿತ್, ಗುಡುಗಳಲೆ ಗ್ರಾಮ, ಶನಿವಾರಸಂತೆ ಅಂಚೆ, ಕೊಡಗು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, (1) ಉಪ ನಿಬಂಧಕರು, ಸಹಕಾರ ಸಂಘಗಳ ಉಪ ನಿಬಂಧಕರು, ಮಡಿಕೇರಿ, (2) ನಿಬಂಧಕರು, ಸಹಕಾರ ಸಂಘಗಳ, ಮಡಿಕೇರಿ (ಇನ್ನು ಮುಂದೆ '1 ಮತ್ತು 2ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ದಾಖಲಿಸಿ, ಸದರಿ ದೂರಿನಲ್ಲಿ, ಹೆಂಡ್ಲಿ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಕಾಫಿ ಪ್ಯಾಕೇಜ್, ಗೊಬ್ಬರದ ಹಣ ಮತ್ತು ಠೇವಣಿಗಳ ಮೇಲಿನ ಬಡ್ಡಿ ದುರುಪಯೋಗ ಇವುಗಳಿಗೆ ಸಂಬಂಧಿಸಿದಂತೆ ಸಹಕಾರ ಸಂಘಗಳ ಉಪ ನಿಬಂಧಕರಿಗೆ ದೂರು ಸಲ್ಲಿಸಿದ್ದು, ಸದರಿ ದೂರು ಸಾಬೀತಾಗಿದ್ದರೂ ಸಹ, ಈ ಬಗ್ಗೆ ಕಾನೂನು ರೀತ್ಯಾ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಆರೋಪಿಸಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿಯಲ್ಲಿ ಪ್ರದತ್ತವಿರುವ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ದೂರುದಾರರ ದೂರಿಗೆ ಸಂಬಂಧಿಸಿದಂತೆ, ಸಹಕಾರ ಅಭಿವೃದ್ಧಿ ಅಧಿಕಾರಿ, ಹೊಳನರಸೀಪುರ ಹಾಗೂ ಕಲಂ 64ರ ವಿಚಾರಣಾಧಿಕಾರಿಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ (ನಿ), ಹಂಡ್ಲಿ, ಸೋಮವಾರಪೇಟೆ ತಾಲ್ಲೂಕು ರವರು ದೂರುದಾರರ ದೂರಿಗೆ ಸಂಬಂಧಿಸಿದಂತೆ ಕೂಲಂಕಷವಾಗಿ ವಿಚಾರಣೆ ನಡೆಸಿ ತಮ್ಮ ವಿವರವಾದ ವರದಿಯನ್ನು ದಿನಾಂಕ: 31/10/2015 ರಂದು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ,

| ಕ್ರಮ ಸಂಖ್ಯೆ: | ಆರೋಪದ ವಿಷಯ | ದುರುಪಯೋಗದ ಮೊತ್ತ ರೂ. | ಶ್ರೀ ಎನ್.ಆರ್. ಸೋಮಶೇಖರ್ ರವರು ಸಂಘಕ್ಕೆ ಪಾವತಿಸಿರುವ ಮೊತ್ತ | ಜವಾಬ್ದಾರಿ ನಿಗದಿಪಡಿಸಿರುವುದು |
|---|---|---|---|---|
| ಆರೋಪ.1 | ಬ್ಯಾಂಕ್ ಡ್ರಾ ಬಾಬ್ತು ಆರೋಪ ಸಾಬೀತಾಗಿದೆ | 97,900 | 97,600 | ಶ್ರೀ ಎನ್.ಆರ್. ಸೋಮಶೇಖರ್ ರವರು ಮಾಜಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಕರ್ತವ್ಯಲೋಪ ಹಾಗೂ ಆರ್ಥಿಕ ನಷ್ಟಕ್ಕೆ ಮತ್ತು ಅಂದಿನ ಆಡಳಿತ ಮಂಡಳಿಯ ಅಧ್ಯಕ್ಷರು, ಆಡಳಿತ ಮೇಲ್ವಿಚಾರಣೆ ವಿಫಲತೆಗೆ ಹೊಣೆಗಾರರು |
| ಆರೋಪ.2 | ಠೇವಣಿಗಳ ಮೇಲಿನ ಬಡ್ಡಿ ಬಾಬ್ತು ಆರೋಪ ಸಾಬೀತಾಗಿದೆ | 45,000 | 45,000 | ಶ್ರೀ ಎನ್.ಆರ್. ಸೋಮಶೇಖರ್ ರವರು ಮಾಜಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಕರ್ತವ್ಯ ಲೋಪ ಹಾಗೂ ಆರ್ಥಿಕ ನಷ್ಟಕ್ಕೆ ಹೊಣೆಗಾರರು |
| ಆರೋಪ.3 | ಕಾಫಿ ಪ್ಯಾಕೇಜ್ ಸಾಲ ಮನ್ನಾ ಬಾಬ್ತು ಆರೋಪ ಸಾಬೀತಾಗಿದೆ | 2,25,415 | 2,25,415 | ಶ್ರೀ ಎನ್.ಆರ್. ಸೋಮಶೇಖರ್ ರವರು ಮಾಜಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಕರ್ತವ್ಯ ಲೋಪ ಹಾಗೂ ಆರ್ಥಿಕ ನಷ್ಟಕ್ಕೆ ಹೊಣೆಗಾರರು |
| ಒಟ್ಟು ಮೊತ್ತ ರೂ. | | 3,68,115 | 3,68,115 | |
| | | ಶೇ.6ರಂತೆ ಬಡ್ಡಿ ಬಾಬ್ತು ರೂ. | 66,243 | |
| | | ಒಟ್ಟು ಪಾವತಿ | ರೂ.4,34,258 | |

W

| | | | | |
|---|---|---|---|---|
| ಆರೋಪ.4 | ಹೊಸ ಕಟ್ಟಡಗಳ ನಿರ್ಮಾಣ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ, ಆರೋಪ ಸಾಬೀತಾಗಿರುತ್ತದೆ | | | ಶ್ರೀ ಎಸ್.ಜೆ. ರವಿಕುಮಾರ್ ಮಾಜಿ ಅಧ್ಯಕ್ಷರು ಮತ್ತು ಹಾಲಿ ನಿರ್ದೇಶಕರು, ಹಾಗೂ ಶ್ರೀ ಆರ್. ಸೋಮಶೇಖರ್‌ರವರು ಮಾಜಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಇವರುಗಳ ತೀವ್ರತರವಾದ ಕರ್ತವ್ಯ ಲೋಪ ಹಾಗೂ ಸಕಾಲದಲ್ಲಿ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆ ಪಡೆಯದೇ ನಿಯಮಗಳ ಉಲ್ಲಂಘನೆಗೆ ಮತ್ತು ಕಟ್ಟಡ ನಿರ್ಮಾಣದ ಕಾಮಗಾರಿಗಳ ಲೆಕ್ಕ ಪತ್ರಗಳನ್ನು ಸೂಕ್ತ ತಜ್ಞರಿಂದ ಎಂ.ಬಿ. ನಿರ್ವಹಿಸಿ ದೃಢೀಕರಿಸಿ ಸೂಕ್ತ ಕ್ರಮವಿಡದೆ ನಿರ್ಲಕ್ಷ್ಯತೆಯಿಂದ ಈ ಎಲ್ಲಾ ಲೋಪಗಳಿಗೆ ನೇರ ಹೊಣೆಗಾರರು ಮತ್ತು ಅಂದಿನ ಆಡಳಿತ ಮಂಡಳಿ ಸದಸ್ಯರುಗಳು ಬೈಲಾ ರೀತ್ಯಾ ಸಕಾಲದಲ್ಲಿ ಜವಾಬ್ದಾರಿಗಳನ್ನು ಪಾಲಿಸದೆ ಇರುವುದರಿಂದ ಸಹ ಹೊಣೆಗಾರರು. |

(1) ಮೇಲ್ಕಾಣಿಸಿದ ಆರೋಪ 1 ರಿಂದ 3 ರವರೆಗಿನ ಆರೋಪಗಳ ಹಣ ದುರುಪಯೋಗಕ್ಕೆ ಸಂಬಂಧಿಸಿದಂತೆ ಶ್ರೀ ಎನ್.ಆರ್.ಸೋಮಶೇಖರ್ ರವರು ಹೊಣೆಗಾರರಾಗಿದ್ದು, ಸಂಘಕ್ಕೆ ಹಣ ಶೇ. 6 ಬಡ್ಡಿಯಂತೆ ರೂ. 66,243/- ಗಳನ್ನು ಪಾವತಿಸಿರುತ್ತಾರೆ. ಈ ಬಾಬ್ತು ಪಾವತಿಸಲು ಬಾಕಿ ಇರುವ ವ್ಯತ್ಯಾಸದ ಹಣವನ್ನು ನಿಯಮಾನುಸಾರ ಅಂದಿನ ಠೇವಣಿಗಳ ಮೇಲಿನ ಬಡ್ಡಿದರದಂತೆ

ಸದರಿಯವರಿಂದ ವಸೂಲಿ ಮಾಡಲು ಆಡಳಿತ ಮಂಡಳಿಯು ಕ್ರಮವಿಡುವುದು ಸೂಕ್ತವೆಂದು ಜವಾಬ್ದಾರಿ ನಿಗಧಿಪಡಿಸಿ ನಿರ್ಣಯಿಸಿದೆ.

(2) ಹೊಸ ಕಟ್ಟಡಗಳ ನಿರ್ಮಾಣ ಕಾಮಗಾರಿಗಳ ಗುಣಮಟ್ಟ, ಸಾಮಗ್ರಿಗಳ ಗುಣಮಟ್ಟ ಮತ್ತು ಮೌಲ್ಯಯುತ ನಿರ್ಣಯಗಳ ಬಗ್ಗೆ ಸೂಕ್ತ ಸರ್ಕಾರಿ ತಾಂತ್ರಿಕ ತಜ್ಞರಿಂದ ಪರಿಶೀಲನೆ ನಡೆಸಿ ಮೌಲ್ಯಮಾಪನ ಮಾಡಿಸಿ ದೃಢೀಕೃತ ಲೆಕ್ಕಪತ್ರಗಳನ್ನು ನಿಯಮಾನುಸಾರ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸುವಂತೆ ಆಡಳಿತ ಮಂಡಳಿ ಕ್ರಮವಿಡುವುದು ಸೂಕ್ತವೆಂದು ನಿರ್ಣಯಿಸಿದೆ. ಮೌಲ್ಯಮಾಪನದಲ್ಲಿನ ಹಣ ಮತ್ತು ವೆಚ್ಚದ ಹಣದಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ಶ್ರೀ ಎಸ್.ಜೆ.ರವಿಕುಮಾರ್ ರವರೇ ನೇರ ಜವಾಬ್ದಾರರು ಮತ್ತು ಬಡ್ಡಿ ಸಹಿತ ಆ ಮೊತ್ತವನ್ನು ನಿಯಮಾನುಸಾರ ಸದರಿಯವರಿಂದ ವಸೂಲಿ ಮಾಡಲು ಆಡಳಿತ ಮಂಡಳಿ ಕ್ರಮವಿಡುವುದು ಸೂಕ್ತವೆಂದು ನಿರ್ಣಯಿಸಿದೆ.

(3) ಸಂಘ ಮತ್ತು ಸದಸ್ಯರ ಹಿತದೃಷ್ಟಿಯಿಂದ ಸಂಘದ ಅಧ್ಯಕ್ಷರುಗಳು ಹಾಗೂ ನಿರ್ದೇಶಕರುಗಳು ಮತ್ತು ಸಂಘದ ಸಿಬ್ಬಂದಿಗಳು ಸಹಕಾರ ಸಂಘಗಳ ಕಾಯ್ದೆ ಹಾಗೂ ನಿಯಮಗಳು ಮತ್ತು ಸಂಘದ ಬೈಲಾ ರೀತ್ಯಾ ಈ ಪರಿಧಿಯಲ್ಲಿ ಜವಾಬ್ದಾರಿಯಿಂದ ಕೆಲಸ ನಿರ್ವಹಿಸುವುದು ಎಲ್ಲರ ಹೊಣೆಯಾಗಿರುತ್ತದೆ.

3. ಸಹಕಾರ ಅಭಿವೃದ್ಧಿ ಅಧಿಕಾರಿ, ಹೊಳನರಸೀಪುರ ಹಾಗೂ ಕಲಂ 64ರ ವಿಚಾರಣಾಧಿಕಾರಿಗಳು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ(ನಿ), ಹಂಡ್ಲಿ, ಸೋಮವಾರಪೇಟೆ ತಾಲ್ಲೂಕು ರವರ ವರದಿಯಲ್ಲಿ ತಿಳಿಸಿರುವಂತೆ ಶ್ರೀ ಎನ್.ಆರ್.ಸೋಮಶೇಖರ್ ಹಾಗೂ ಅಂದಿನ ಅಧ್ಯಕ್ಷರಾದ ಶ್ರೀ ಎಸ್.ಜೆ.ರವಿಕುಮಾರ್ ರವರುಗಳನ್ನು ಕ್ರಮವಾಗಿ 3 ಮತ್ತು 4ನೇ ಎದುರುದಾರರನ್ನಾಗಿ ಮುಖಪುಟದಲ್ಲಿ implead ಮಾಡಲು ಗೌರವಾನ್ವಿತ ಉಪಲೋಕಾಯುಕ್ತರು ಕಂಡಿಕೆ 29ರಲ್ಲಿ ಆದೇಶಿಸಿರುತ್ತಾರೆ.

4. ಈ ಸಂಬಂಧ, ಗೌರವಾನ್ವಿತ ಉಪಲೋಕಾಯುಕ್ತರ ಆದೇಶದ ಮೇರೆಗೆ 3 ಮತ್ತು 4ನೇ ಎದುರುದಾರರನ್ನಾಗಿ implead ಮಾಡಿ, ನಂತರ 3 ಮತ್ತು 4ನೇ ಎದುರುದಾರರಿಗೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ತಿಳಿಸಲಾಗಿದ್ದು, 3 ಮತ್ತು 4ನೇ

ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ, ದೂರಿನ ಆಪಾದನೆಗಳನ್ನು ನಿರಾಕರಿಸಿರುತ್ತಾರೆ. ಆದರೆ, ಪ್ರಸ್ತುತ ಹಂತದಲ್ಲಿ ಸದರಿ 3 ಮತ್ತು 4ನೇ ಎದುರುದಾರರ ಆಕ್ಷೇಪಣೆಗಳನ್ನು ಒಪ್ಪಲಾಗುವುದಿಲ್ಲ.

5. ದೂರಿನಲ್ಲಿ ಇರುವ ಆಪಾದನೆ ಹಾಗೂ ದಾಖಲಾತಿಗಳನ್ನು ಪರಿಶೀಲಿಸಲಾಗಿ 3 ಮತ್ತು 4ನೇ ಎದುರುದಾರರುಗಳು ಈ ಕೆಳಕಂಡಂತೆ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

- 3ನೇ ಎದುರುದಾರರು, ಬ್ಯಾಂಕ್ ಡ್ರಾ ಬಾಬ್ತು, ಠೇವಣಿಗಳ ಮೇಲಿನ ಬಡ್ಡಿ ಬಾಬ್ತು, ಕಾಫಿ ಪ್ಯಾಕೇಜ್ ಸಾಲ ಮನ್ನಾ ಬಾಬ್ತು ಆರೋಪಕ್ಕೆ ಸಂಬಂಧಿಸಿದಂತೆ ರೂ.3,68,015/- ದುರುಪಯೋಗ ಪಡಿಸಿಕೊಂಡಿದ್ದು, ನಂತರ ಸದರಿ ಮೊತ್ತಕ್ಕೆ ಶೇ. 6% ಬಡ್ಡಿಯಂತೆ ರೂ.66,243/- ಗಳಂತೆ ಒಟ್ಟು ರೂ.4,34,258/- ಗಳನ್ನು ಹಣಕ್ಕೆ ಪಾವತಿಸಿರುತ್ತಾರೆ. ಮೇಲಿನ ಅಂಶಕ್ಕೆ ಸಂಬಂಧಿಸಿದಂತೆ ಎದುರುದಾರರು ಮೇಲ್ಕಂಡ ಕರ್ತವ್ಯ ಲೋಪವೆಸಗಿದ್ದು, ತದನಂತರ ಸಂಘಕ್ಕೆ ಹಣ ಪಾವತಿಸಿರುವುದು ಕಂಡುಬರುತ್ತದೆ.
- 4ನೇ ಎದುರುದಾರರಾದ ಶ್ರೀ ಶ್ರೀ ಎಸ್.ಜೆ.ರವಿಕುಮಾರ್ ರವರು ಹೊಸ ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಸಕಾಲದಲ್ಲಿ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆ ಪಡೆಯದೇ ನಿಯಮಗಳ ಉಲ್ಲಂಘನೆಗೆ ಮತ್ತು ಕಟ್ಟಡ ನಿರ್ಮಾಣದ ಕಾಮಗಾರಿಗಳ ಲೆಕ್ಕ ಪತ್ರಗಳನ್ನು ಸೂಕ್ತ ತಜ್ಞರಿಂದ ಎಂ.ಬಿ. ನಿರ್ವಹಿಸಿ ದೃಢೀಕರಿಸಿ ಸೂಕ್ತ ಕ್ರಮವಿಡದೆ ನಿರ್ಲಕ್ಷಿತೆಯಿಂದ ಈ ಎಲ್ಲಾ ಲೋಪಗಳಿಗೆ ನೇರ ಹೊಣೆಗಾರರಾಗಿರುತ್ತಾರೆ ಹಾಗೂ ಬೈಲಾ ರೀತ್ಯಾ ಸಕಾಲದಲ್ಲಿ ಜವಾಬ್ದಾರಿಗಳನ್ನು ಪಾಲಿಸದೆ 4ನೇ ಎದುರುದಾರರು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

6. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 3 ಮತ್ತು 4ನೇ ಎದುರುದಾರರುಗಳು ಸಾರ್ವಜನಿಕ/ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ,

ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸಾರ್ವಜನಿಕ/ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆ ಎಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

7. ಆದಕಾರಣ, ಗೌರವಾನ್ವಿತರು ಒಪ್ಪಿದಲ್ಲಿ, 3 ಮತ್ತು 4ನೇ ಎದುರುದಾರರುಗಳು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1)(ii) ಮತ್ತು (iii)ರಲ್ಲಿ ಹೇಳಿದಂತೆ ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, '3 ಮತ್ತು 4ನೇ ಎದುರುದಾರರ' ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎರ ಅಡಿಯಲ್ಲಿ ಎದುರುದಾರರ ವಿರುದ್ಧ ಇಲಾಖಾ **ವಿಚಾರಣೆ ಮಾಡಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ,** ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

8. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984, ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಈ ವರದಿ ಮುಟ್ಟಿದ ದಿನಾಂಕದಿಂದ **ಮೂರು ತಿಂಗಳ ಅವಧಿಯೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 8/3/17

**(ನ್ಯಾಯಮೂರ್ತಿ ಸುಭಾಷ್ ಬಿ. ಅಡಿ)**
**ಉಪಲೋಕಾಯುಕ್ತರು-2,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**

8/3/17